

ದಾರಿ ಎಂದು ವೈದ್ಯರು ತಿಳಿಸಿದರು. ಇವರ 23 ವರ್ಷದ ಮಗಳ ಲಿವರ್ ಪಡೆದು ಪ್ರೇಮಾಗೆ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಈಗ ಪ್ರೇಮಾ ಸಂಪೂರ್ಣವಾಗಿ ಚೇತರಿಸಿಕೊಂಡಿದ್ದು ದೈನಂದಿನ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ.

***

ಪಿತ್ತಜನಕಾಂಗ ಕಸಿ ಈಗೀಗ ಬಹಳ ಜನಪ್ರಿಯವಾಗುತ್ತಿದೆ. ಹಿಂದೆಲ್ಲಾ ಪಿತ್ತಜನಕಾಂಗಕ್ಕೆ ಹಾನಿಯಾದರೆ ಜೀವಕ್ಕೇ ಸಂಚಕಾರ ಬರುತ್ತಿತ್ತು. ಶಸ್ತ್ರಚಿಕಿತ್ಸೆಯಿಂದ ಹಾನಿಯಾದ ಭಾಗದ ಮರುಜೋಡಣೆಯೂ ಅಸಾಧ್ಯವಾಗಿತ್ತು. ಆದರೆ ಈಗ ವೈದ್ಯ ವಿಜ್ಞಾನ ಅತ್ಯಾಧುನಿಕವಾಗಿದೆ. ಸಂಬಂಧಿಕರಿಂದ ಇಲ್ಲವೇ ದಾನಿಯಿಂದ ಪಡೆದ ಪಿತ್ತಜನಕಾಂಗ ಭಾಗವನ್ನು ಕಸಿ ಮಾಡುವ ಮೂಲಕ ರೋಗಿಯ ಜೀವವನ್ನು ಉಳಿಸಬಹುದಲ್ಲದೆ ರೋಗಿ ಸಂಪೂರ್ಣ ಚೇತರಿಸಿಕೊಂಡು ದೈನಂದಿನ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತಾಗಿದೆ.

'ಕರ್ನಾಟಕದಲ್ಲಿ ಪಿತ್ತಜನಕಾಂಗ ಸಮಸ್ಯೆಯಿಂದ ಬಳಲುತ್ತಿರುವ ಸಾವಿರಾರು ರೋಗಿಗಳಿದ್ದಾರೆ. ಈ ಎಲ್ಲರಿಗೂ ಯಕೃತ್ ಕಸಿಯ ಅವಶ್ಯಕತೆಯೂ ಇದೆ. ಆದರೆ ದಾನಿಗಳ ಕೊರತೆಯಿಂದ ಈ ಸಮಸ್ಯೆ ಬಗೆಹರಿಸಲು ಕಷ್ಟವಾಗುತ್ತಿದೆ. ಪಿತ್ತಜನಕಾಂಗವೂ ಸೇರಿದಂತೆ ಬಹು ಅಂಗಾಂಗ ದಾನ ಮಾಡುವ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕಾಗಿದೆ' ಎಂದು ಹೇಳುತ್ತಾರೆ ಬೆಂಗಳೂರಿನ ಗ್ಲೋಬಲ್ ಆಸ್ಪತ್ರೆಯಲ್ಲಿ ಯಕೃತ್ ಕಸಿ ತಜ್ಞರಾಗಿರುವ ಡಾ. ಸಂಜಯ್ ಗೋವಿಲ್.

'ಎಷ್ಟೋ ಅಪಘಾತ ಸಂದರ್ಭಗಳಲ್ಲಿ ಮೆದುಳು ನಿಷ್ಕ್ರಿಯಗೊಂಡಿರುತ್ತದೆ (ಬ್ರೈನ್ ಡೆಡ್). ಆದರೆ ಉಳಿದೆಲ್ಲ ಅಂಗಾಂಗಗಳು ಚೆನ್ನಾಗಿದ್ದು, ಆರೋಗ್ಯಪೂರ್ಣವಾಗಿರುತ್ತವೆ. ಇಂತಹ ವೇಳೆ ಸಂಬಂಧಿಕರು ಪಿತ್ತಜನಕಾಂಗ, ಕಣ್ಣು, ಕಿಡ್ನಿ, ಹೃದಯ ಮುಂತಾದ ಅಂಗಗಳನ್ನು ದಾನ ಮಾಡಬಹುದು. ಈ ವಿಚಾರ ಅನೇಕರಿಗೆ ತಿಳಿಯದೇ ಇರುವ ಕಾರಣ ಜನರಲ್ಲಿ ಅರಿವು ಮೂಡಿಸಬೇಕಾಗಿದೆ' ಎಂದು ಸಲಹೆ ಮಾಡುತ್ತಾರೆ ಡಾ. ಸಂಜಯ್.

'ಪಿತ್ತಜನಕಾಂಗದ ಭಾಗವನ್ನು ಒಮ್ಮೆ ದಾನ ಮಾಡಿದ ಮೇಲೆ ಅದು ದಾನಿಯ ದೇಹದಲ್ಲಿ ಮತ್ತೆ ತಾನಾಗಿಯೇ ಬೆಳೆಯುತ್ತದೆ. ಈ ವಿಶಿಷ್ಟ ಗುಣ ಇರುವುದು ಇದೊಂದೇ ಅಂಗಕ್ಕೆ. ಅಲ್ಲದೆ ದಾನಿ ಬೇಗನೇ ಚೇತರಿಸಿಕೊಳ್ಳುತ್ತಾನೆ. ಯಾವ ಅಡ್ಡಪರಿಣಾಮವಾಗಲೀ, ಜೀವಕ್ಕೆ ಹಾನಿಯಾಗಲೀ ಆಗುವುದಿಲ್ಲ. ಹೀಗಾಗಿ ದಾನಿಗಳು ಆತಂಕಪಡುವ ಅಗತ್ಯವಿಲ್ಲ. ಬಿಜಿಎಸ್ ಆಸ್ಪತ್ರೆಯಲ್ಲಿ ಇತ್ತೀಚೆಗೆ ಒಬ್ಬರು ದಾನ ನೀಡಿದ ಯಕೃತ್ ಅನ್ನು ಮೂರು ಮಕ್ಕಳಿಗೆ ಕಸಿ ಮಾಡಿದ್ದೇವೆ. ಈಗ ದಾನಿ ಹಾಗೂ ಮೂರೂ ಮಕ್ಕಳು ಆರೋಗ್ಯವಾಗಿವೆ' ಎಂದು ಉದಾಹರಣೆ ಸಹಿತ ಮಾಹಿತಿ ನೀಡುತ್ತಾರೆ ಈ ವೈದ್ಯರು.

ಯಕೃತ್ ಕಸಿಗೆ ತಗಲುವ ಅಂದಾಜು ವೆಚ್ಚ 18ರಿಂದ 24 ಲಕ್ಷ ರೂಪಾಯಿ. ಆದರೆ ಸಂಬಂಧಿಕರಿಂದ ಲಿವರ್ ದಾನ ಪಡೆದು ಕಸಿ ಮಾಡಿಸಿಕೊಂಡರೆ ವೆಚ್ಚ ಕಡಿಮೆ. ದಾನಿಗಳಿಂದ ಪಡೆದರೆ ರೋಗಿ ಹಾಗೂ ದಾನಿ ಇಬ್ಬರ ಆರೋಗ್ಯದ ನಿರ್ವಹಣೆಯ ವೆಚ್ಚ ಸ್ವಲ್ಪ ಹೆಚ್ಚಾಗುತ್ತದೆ.

ಯಕೃತ್ ಕಸಿಯನ್ನು ಪುಟ್ಟ ಮಗುವಿನಿಂದ ಹಿಡಿದು ಇಳಿವಯಸ್ಸಿನವರೆಗೆ ಯಾರಿಗೆ ಬೇಕಾದರೂ ಮಾಡಬಹುದು. ಮಕ್ಕಳಿಗೆ ಕಸಿ ಮಾಡಬೇಕಾದರೆ ಕನಿಷ್ಠ ಮಗುವಿಗೆ 11 ಕಿಲೋಗ್ರಾಂ ತೂಕ ಆಗುವವರೆಗೆ ಕಾಯಬೇಕಾಗುತ್ತದೆ. ಬಿಜಿಎಸ್ ಆಸ್ಪತ್ರೆಯಲ್ಲಿ 76 ರ ಹರೆಯದ ವ್ಯಕ್ತಿಗೂ ಇತ್ತೀಚೆಗೆ ಯಕೃತ್ ಕಸಿ ಮಾಡಲಾಗಿದೆ.

'ಪಿತ್ತಜನಕಾಂಗ ಸಮಸ್ಯೆಗೆ ಇಂಥದ್ದೇ ನಿರ್ದಿಷ್ಟ ಕಾರಣಗಳಿವೆ ಎಂದು ಹೇಳುವುದು ಕಷ್ಟ. ಎಷ್ಟೋ ಬಾರಿ ತೊಂದರೆ ಕೊನೆಯ ಹಂತ ತಲುಪುವವರೆಗೂ ಗೊತ್ತಾಗುವುದೇ ಇಲ್ಲ. ಸುಸ್ತು, ಹೊಟ್ಟೆನೋವಿನಂತಹ ಸಾಮಾನ್ಯ ಸಮಸ್ಯೆಗಳನ್ನು ಬಿಟ್ಟರೆ ಬೇರೆ ಯಾವುದೇ ಲಕ್ಷಣಗಳನ್ನು ತೋರದೆ ದಿಢೀರ್ ಎಂದು ಕೊನೆಯ ಕ್ಷಣಕ್ಕೇ ಆಘಾತ ನೀಡುವ ಈ ಕಾಯಿಲೆ ಬರದಂತೆ ತಡೆಯಲು ವ್ಯವಸ್ಥಿತ ಜೀವನಶೈಲಿ, ಸಾತ್ವಿಕ ಆಹಾರ ಸೇವನೆ, ನಡಿಗೆ ವ್ಯಾಯಾಮದಂತಹ ದೈಹಿಕ ಚಟುವಟಿಕೆಗಳಿಂದ ಸಾಧ್ಯ' ಎನ್ನುತ್ತಾರೆ ಇದೇ ಆಸ್ಪತ್ರೆಯ ತಜ್ಞ ವೈದ್ಯ ಡಾ.ಸುರೇಶ್ ರಾಘವಯ್ಯ.

'ಬಿಜಿಎಸ್ ಗ್ಲೆನಿಗಲ್ಸ್ ಗ್ಲೋಬಲ್ ಆಸ್ಪತ್ರೆಯಲ್ಲಿ ಇದುವರೆಗೆ 200 ಮಂದಿಗೆ ಯಶಸ್ವಿಯಾಗಿ ಯಕೃತ್ ಕಸಿ ಮಾಡಲಾಗಿದೆ. ಕಳೆದ 10 ವರ್ಷಗಳಿಂದ ಇಲ್ಲಿ ಲಿವರ್ ಕಸಿ ಮಾಡಲಾಗುತ್ತಿದ್ದು, ಕರ್ನಾಟಕದಲ್ಲೇ ಅತೀ ಹೆಚ್ಚು ಕಸಿ ಮಾಡಿದ ಆಸ್ಪತ್ರೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪ್ರತಿ ತಿಂಗಳು ಸರಾಸರಿ 2–3 ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ' ಎಂದು ಮಾಹಿತಿ ನೀಡುತ್ತಾರೆ ಈ ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶೈಲಜಾ ಸುರೇಶ್.

ಅತಿತೂಕದ ನಿರ್ವಹಣೆ, ಮಾನಸಿಕ ಒತ್ತಡ ಕಡಿಮೆ ಮಾಡುವುದು, ಮಧುಮೇಹದ ನಿಯಂತ್ರಣ ಇವೆಲ್ಲ ಆರೋಗ್ಯ ಕಾಪಾಡಿಕೊಳ್ಳುವ ವಿಧಾನ. ಜೊತೆಗೆ ನಿಯಮಿತ ವ್ಯಾಯಾಮ, ನಡಿಗೆ ನಿತ್ಯವೂ ಮಾಡಿಕೊಂಡರೆ ಯಾವುದೇ ಸಮಸ್ಯೆಗಳು ಎದುರಾಗುವುದಿಲ್ಲ.

### ಪಿತ್ತಜನಕಾಂಗಕ್ಕೆ ಹಾನಿಯಾಗಲು ಕಾರಣಗಳೇನು?

- ದೇಹದಲ್ಲಿ ಅಧಿಕ ಕೊಬ್ಬಿನಂಶ
- ಅತಿತೂಕ
- ವಿಪರೀತ ಮದ್ಯಪಾನ
- ತೀವ್ರತರದ ಸೋಂಕು
- ಕಾಮಾಲೆ
- ಮಕ್ಕಳಲ್ಲಿ ಆನುವಂಶಿಕ ಕಾರಣ
- ಮಧುಮೇಹ, ಹೈಪರ್‌ಟೆನ್ಷನ್
- ಹೃದ್ರೋಗ ಸಮಸ್ಯೆ ಇದ್ದರೆ...
- ಒತ್ತಡದ ಜೀವನಶೈಲಿ



ಪಿತ್ತಜನಕಾಂಗ ಸಮಸ್ಯೆಗೆ ಇಂಥದ್ದೇ ನಿರ್ದಿಷ್ಟ ಕಾರಣಗಳಿವೆ ಎಂದು ಹೇಳುವುದು ಕಷ್ಟ. ಎಷ್ಟೋ ಬಾರಿ ತೊಂದರೆ ಕೊನೆಯ ಹಂತ ತಲುಪುವವರೆಗೂ ಗೊತ್ತಾಗುವುದೇ ಇಲ್ಲ.